**ದಿನಾಂಕಃ 25.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ**

1. ನಾನು ನಿಡಿ 107 ಮತ್ತು ನಿಡಿ 108 ರಂತೆ ದಾಖಲೆ ಹಾಜರು ಮಾಡಿದ ಓ.ಎಸ್. ನಂ. 74/2014 ರ ದಾವೆಯಲ್ಲಿ ಯಾರು ವಾದಿಗಳಾಗಿದ್ದರು ಮತ್ತು ಯಾರು ಪ್ರತಿವಾದಿಗಳಾಗಿದ್ದರು ಎಂದು ತೋರಿಸುವ ವಾದ ಪತ್ರವನ್ನು ಹಾಜರು ಮಾಡಿದ್ದೀನಾ? ಎಂದರೆ ಹಾಜರು ಮಾಡಿಲ್ಲ. ಈ ದಾವೆಯ ವಾದಿ ಗುರುಬಸವನಗೌಡ ರವರು ವಾದ ಪತ್ರದಲ್ಲಿ ಓ.ಎಸ್. ನಂ.74/2014 ರ ವಿವರಗಳನ್ನು ತಿಳಿಸಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ದಾವೆಯ ವಾದಿಯು ಹಿಂದಿನ ದಾವೆ ಓ.ಎಸ್. ನಂ.74/2014 ರಲ್ಲಿ ಈ ದಾವೆಯ 1 ಮತ್ತು 8 ನೇ ಪ್ರತಿವಾದಿಗಳು ಆತನಿಂದ 3 ನೇ ವಾದಿಯಾಗಿ ಸೇರ್ಪಡೆಯಾಗುವಂತೆ ಸಹಿ ಪಡೆದಿದ್ದರು ಮತ್ತು ಆ ಪ್ರತಿವಾದಿಗಳು ಶಾಮೀಲಾಗಿ ದಾವೆ ಸಲ್ಲಿಸಿದ್ದಾರೆಂದು ವಾದಿಗೆ ತಿಳಿದು ಬಂದಿದ್ದರಿಂದ ವಾದಿಯು ಮಧ್ಯಂತರ ಅರ್ಜಿ ಸಲ್ಲಿಸಿ ದಿನಾಂಕ 27.02.2019 ರಂದು ಓ.ಎಸ್. ನಂ.74/2014 ರಲ್ಲಿ ಆತನನ್ನು ಪಕ್ಷಕಾರರನ್ನಾಗಿ ಕಿತ್ತು ಹಾಕುವಂತೆ ಆದೇಶ ಪಡೆದಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಓ.ಎಸ್.ನಂ.74/2014 ರಲ್ಲಿ ನಾನೂ ಕೂಡಾ ಪಕ್ಷಕಾರನಾಗಿದ್ದೆ ಎಂದರೆ ಸರಿ. ಓ.ಎಸ್.ನಂ.74/2014 ನ್ನು ಮೊದಲಿಗೆ ಈ ದಾವೆಯ 1 ನೇ ಪ್ರತಿವಾದಿ ನೀಲವ್ವ ಮತ್ತು 8 ನೇ ಪ್ರತಿವಾದಿ ತಾಯವ್ವ ಮಾತ್ರ ವಾದಿಗಳಾಗಿ ಸಲ್ಲಿಸಿದ್ದರು ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ಓ.ಎಸ್. ನಂ.74/2014 ರ ವಾದ ಪತ್ರ, ಪ್ರತಿವಾದ ಪತ್ರ ಮತ್ತು ಎಲ್ಲಾ ಮಧ್ಯಂತರ ಅರ್ಜಿಗಳನ್ನು ನಾನು ಹಾಜರು ಮಾಡಿಲ್ಲ ಎಂದರೆ ಸರಿ. ವಾದಿಯ ಹಿಸ್ಸೆಯನ್ನು ಕಬಳಿಸುವ ಉದ್ದೇಶದಿಂದ ನನ್ನ ತಂದೆಯವರು ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ವಕೀಲರಾಗಿ ಅವರ ಪ್ರಭಾವ ಬಳಸಿ ಕಂದಾಯ ಇಲಾಖೆಯಿಂದ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಇಸವಿ 2000 ದಲ್ಲಿ ನನಗೆ ಎಷ್ಟು ವಯಸ್ಸಾಗಿತ್ತು? ಎಂದರೆ ನಾನು ದಿನಾಂಕ 15.06.1990 ರಂದು ಜನಿಸಿದ್ದು 2000 ನೇ ಇಸವಿಯಲ್ಲಿ ನನಗೆ 10 ವರ್ಷ ವಯಸ್ಸಾಗಿತ್ತು.

**ಪಾಟೀ ಸವಾಲು : 7 ನೇ ಪ್ರತಿವಾದಿಯ ಪರ ವಕೀಲರಿಂದಃ**

2. ನಾವು ಕ್ರಯ ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಅದರ ಬಗ್ಗೆ 6 ನೇ ಪ್ರತಿವಾದಿಯ ಗಮನಕ್ಕೆ ತಂದಿದ್ದುಂಟೇ? ಎಂದರೆ ಇಲ್ಲ. 6 ನೇ ಪ್ರತಿವಾದಿಯ ಒಪ್ಪಿಗೆ ಮತ್ತು ಸಹಿ ಪಡೆದು ಕ್ರಯ ಪತ್ರ ಮಾಡಿಸಿಕೊಳ್ಳಲು ನಮಗೆ ತೊಂದರೆ ಇರಲಿಲ್ಲ ಎಂದರೆ ಇಸವಿ 2000 ದಲ್ಲೇ ಪಾಲುವಿಭಾಗ ಪತ್ರ ಆಗಿದ್ದರಿಂದ ನಮಗೆ 6 ನೇ ಪ್ರತಿವಾದಿಯ ಸಮ್ಮತಿ ಮತ್ತು ಸಹಿ ಪಡೆಯಬೇಕಾದ ಅವಶ್ಯಕತೆ ಇರಲಿಲ್ಲ. ನಮ್ಮ ಕ್ರಯ ಪತ್ರವು 6 ಮತ್ತು 7 ನೇ ಪ್ರತಿವಾದಿಗಳ ಮೇಲೆ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಕೂಡಾ ಒಟ್ಟು ಕುಟುಂಬದ ಸದಸ್ಯಳಾಗಿದ್ದು ಆಕೆಗೂ ಸಮನಾದ ಹಿಸ್ಸೆ ಪಡೆಯುವ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**